ಕಚೇರಿಯಲ್ಲೋ ಮಲಗುತ್ತಾ, ಓದುತ್ತಾ, ಬರೆಯುತ್ತಾ ಬೆಳೆದರು.'

ಸಾಹಿತ್ಯ, ಸಿದ್ಧಾಂತಗಳ ಗಂಭೀರ ವಿದ್ಯಾರ್ಥಿಯಾಗಿದ್ದ ಡಿ.ಆರ್. ವ್ಯಕ್ತಿತ್ವದಲ್ಲಿ ತಾನು ಮಾಡಬೇಕಾಗಿದ್ದ ಕೆಲಸದ ಬಗ್ಗೆ ಸ್ಪಷ್ಟತೆಯ ಜೊತೆಗೇ ಪರಿಶ್ರಮ, ಬೌದ್ಧಿಕ ಕಾಳಜಿ, ಸಾಮಾಜಿಕ ಜವಾಬ್ದಾರಿ, ದಕ್ಷತೆಯ ಹುಡುಕಾಟ ಎಲ್ಲವೂ ವಿಕಾಸಗೊಳ್ಳುತ್ತಿದ್ದವು. ಪಶ್ಚಿಮದ ಸಾಹಿತ್ಯ ವಿಮರ್ಶೆಯ ದೊಡ್ಡ ಪಾಠಗಳನ್ನು ಕಲಿಯುತ್ತಲೇ ವಿಮರ್ಶೆ, ಸಂಶೋಧನೆಗಳ ಜಾಡುಗಳ ಹುಡುಕಾಟ; ಕಮ್ಯುನಿಸ್ಟ್ ಪಾರ್ಟಿ, ಸಮಾಜವಾದಿ ಯುವಜನ ಸಭಾಗಳಲ್ಲಿ ಕಲಿತ ತತ್ವಗಳನ್ನು ಸಮಾಜಕ್ಕೆ ಉಪಯುಕ್ತವಾಗಿಸುವ ಕಾತರ; ತಾನು ಎಲ್ಲಿ ನಿಂತಿದ್ದೇನೆ, ತನ್ನ ಬೌದ್ಧಿಕ ಮಟ್ಟ ಯಾವುದು ಎಂದು ಸದಾ ಪರೀಕ್ಷಿಸಿಕೊಳ್ಳುವ ಕಾತರ—ಇವೆಲ್ಲವೂ ಎಲ್ಲ ಕಾಲದ ವಿದ್ಯಾರ್ಥಿಗಳಿಗೂ ಮಾದರಿಯಂತಿವೆ. ಇಲ್ಲಿನ ಡಿ.ಆರ್. ನಿಲುವುಗಳು ಮುಂದೆ ಬೆಳೆದು ಬದಲಾದ ರೀತಿ ಕೂಡ ಸದಾ ಬೆಳೆಯಬಯಸುವ ಚಿಂತಕ, ಚಿಂತಕಿಯರಿಗೆ ಉಪಯುಕ್ತವಾಗಬಲ್ಲವು. ಎಂ.ಎ. ಓದುವಾಗ 'ಇಂಗ್ಲಿಷ್ ಸಾಹಿತ್ಯ', 'ಯುರೋಪಿಯನ್ ಸಾಹಿತ್ಯ'ಗಳನ್ನು ಆರಿಸಿಕೊಂಡಿದ್ದ ಡಿ.ಆರ್. ತರಗತಿಯ ಪಠ್ಯಗಳನ್ನು ಗಂಭೀರವಾಗಿ, ಸ್ವತಂತ್ರವಾಗಿ ಹಾಗೂ ತೌಲನಿಕವಾಗಿಯೂ ಅಧ್ಯಯನ ಮಾಡಲಾರಂಭಿಸಿದ್ದರು. ಕನ್ನಡ ನವ್ಯ ಸಾಹಿತ್ಯದ ಒತ್ತಡಗಳು, ಪಾಶ್ಚಾತ್ಯ ನಾಗರಿಕತೆ—ಇಂಗ್ಲಿಷ್ ಕಾವ್ಯಗಳ ಸಂಬಂಧ, 'ಮಾರ್ಕ್ಸ್ ಹೇಳುವ ಪರಕೀಯತೆಗೂ, ನಾಗರಿಕತೆಯ ಸ್ಥಿತಿಯಿಂದ ಹುಟ್ಟಿದ ಯುರೋಪಿಯನ್ ನವ್ಯ ಸಾಹಿತ್ಯದ ಪರಕೀಯತೆಗೂ ಇರುವ ಸಾಮ್ಯ ಎಷ್ಟರ ಮಟ್ಟಿನದು?' ಎಂಬ ಪ್ರಶ್ನೆಗಳು... ಹೀಗೆ ಒಟ್ಟಾರೆಯಾಗಿ ಯಾವುದೇ ಭಾಷೆಯ ಸಾಹಿತ್ಯವನ್ನು ನೋಡಬಲ್ಲ ವಿಶಾಲ ಕ್ರಮವೊಂದನ್ನು ಅವರು ರೂಢಿಸಿಕೊಂಡರು. ಸಾಹಿತ್ಯ ಅಥವಾ ಇನ್ಯಾವುದೇ ವಿಷಯಗಳನ್ನು ತರಗತಿಗಳಲ್ಲಿ ಅಧ್ಯಯನ ಮಾಡುವಾಗಲೇ ಆ ಪಠ್ಯಗಳನ್ನು ಗಂಭೀರವಾಗಿ ಗ್ರಹಿಸಿದರೆ ಅಲ್ಲಿಂದಾಚೆಗೆ ಬೆಳೆಯುವ ದಾರಿಗಳು ಕಾಣುವ ರೀತಿಗಳನ್ನು ಡಿ.ಆರ್. ಅನುಭವ ಸೂಚಿಸುತ್ತದೆ.

ಡಿ.ಆರ್.ಗೆ ತಾರುಣ್ಯದ ಆರಂಭದಲ್ಲೇ ಇದ್ದ ಕನ್ನಡ



'ಅಡಿಗರ 'ಶ್ರೀರಾಮನವಮಿಯ ದಿವಸ' ಮತ್ತು ಬೇಂದ್ರೆಯವರ 'ಜೋಗಿ' ಪದ್ಯಗಳನ್ನು ಓದುತ್ತಾ ಡಿ.ಆರ್.ಗೆ ಹೀಗೆನ್ನಿಸುತ್ತದೆ: 'ಬೇಂದ್ರೆ ತಮ್ಮ ಅನುಭವವನ್ನು ಭಾವತೀವ್ರತೆಯ ಮೂಲಕ ತಲುಪಲು ಬಯಸುತ್ತಾರೆ; ಆದರೆ ಅಡಿಗರು ಅನುಭವವನ್ನು ರಿಸರ್ಚ್ ಮತ್ತು ತರ್ಕದ ಮೂಲಕ ತಲುಪಲು ಬಯಸುತ್ತಾರೆ.'